**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ</u>**

**<u>ಕೆ ಆರ್ ನಗರ.</u>**

**<u>ಸಿ.ಸಿ. ನಂ. 83 /2026</u>**

ಪಿರ್ಯಾದಿ ಃ ಸರ್ಕಾರದ ಪರ ಕೆ ಆರ್ ನಗರ ಪೋಲೀಸ್ ಠಾಣೆ

ಃವಿರುದ್ಧ ಃ

ಆರೋಪಿ ಃ ಭಾಸ್ಕರ್ ಕೆ ಬಿನ್ ಕೃಷ್ಣೇಗೌಡ
31 ವರ್ಷ
ವಾಸಃ ಕಂಚಿನಕೆರೆ ಗ್ರಾಮ,
ಕೆ.ಆರ್.ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

**<u>ದೋಷಾರೋಪಣೆ</u>**

ಶ್ರೀ ಚಂದನ್.ಎಸ್ ಬಿ.ಕಾಮ್.,ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿ ನಾಯಾಧೀಶರು, ಕೆ.ಆರ್.ನಗರ ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಿಸುವುದೇನೆಂದರೆಃ

ದಿನಾಂಕಃ 18-09-2025 ರಂದು ರಾತ್ರಿ 7.30 ರಂದು ಕೆ.ಆರ್.ನಗರ ಪೊಲೀಸ್ ಠಾಣಾ ಸರಹದ್ದು ಕಂಚಿನಕೆರೆ ಗ್ರಾಮದ ಅಮಾಸೇಗೌಡ ರವರ ಮನೆಯ ಬಳಿ ಇರುವ ಕೆ.ಆರ್ ನಗರ ಸೋಮನಹಳ್ಳಿ ರಸ್ತೆಯಲ್ಲಿ ಚಾಸಾ-3 ಚರಣಕುಮಾರವರು ಚಾಸಾ-8 ಮಹಾದೇವರವರಿಗೆ ಸಂಬಂಧಿಸಿದ ಕೆಎ-13-ಇಎಕ್ಸ್ ಸ್ಲೆಂಡರ್ ಮೋಟಾರ್ ಬೈಕ್ ನಲ್ಲಿ ಗಾಯಾಳುವಾದ ಚಾಸಾ-2 ರವರನ್ನು ಶಿವಮೋಗ್ಗ ರವರನ್ನು ಹಿಂದೆ ಕೂರಿಸಿಕೊಂಡು ರಸ್ತೆಯ ಎಡಬದಿಯಲ್ಲಿ ಹೋ ಗುತ್ತಿರುವಾಗ ಅದೇ ಸಮಯಕ್ಕೆ ಆರೋಪಿಯಾದ ನೀವು ಚಾಸಾ-7 ಮನೋಜ ಬಿ ಎಸ್ ರವರಿಗೆ ಸೇರಿದ ವಾಹನ ಸಂಖ್ಯೆ ಕೆಎ-09-ಜೆಡಿ-6913 ಹಿರೋ ಸ್ಲೆಂಡರ್ ಪ್ಲಸ್ ಮೋಟಾರ್ ಬೈಕ್ ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಎದುರುಗಡೆಯಿಂದ ಬಂದು ಚಾಸಾ-3 ರವರು ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಬೈಕಿನ ಬಲಭಾಗದಲ್ಲಿ ಮಹಿಳೆಯರು ಹಿಡಿದುಕೊಂಡು ಕೂರುವ ಕಬ್ಬಿಣದ ಹ್ಯಾಂಡಲ್ ಗೆ ಡಿಕ್ಕಿ ಮಾಡಿದ ಪರಿಣಾಮ ಚಾಸಾ-2 ರವರು ಬಲಭಾಗದ ಮಂಡಿಯ ಬಳಿಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **281** ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ ಎಂದು ಆರೋಪಣೆ ಹೊರಿಸಲಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ತಾರೀಖು, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ವಾಹನ ಸಂಖ್ಯೆ ಕೆಎ-09-ಜೆಡಿ-6913 ಹಿರೋ ಸ್ಲೆಂಡರ್ ಪ್ಲಸ್ ಮೋಟಾರ್ ಬೈಕ್ ನ್ನು ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ  ಚಾಸಾ-3 ರವರ ಬಲಭಾಗದ ಮುಂಗೈಗೆ ಹಾಗೂ ಬಲಭಾಗದ ಮಂಡಿಯ ಬಳಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ **ಕಲಂ 125(ಎ)** ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ ಎಂದು  ಆರೋಪಣೆ ಹೊರಿಸಲಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ತಾರೀಖು, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ವಾಹನ ಸಂಖ್ಯೆ ಕೆಎ-09-ಜೆಡಿ-6913 ಹಿರೋ ಸ್ಲೆಂಡರ್ ಪ್ಲಸ್ ಮೋಟಾರ್ ಬೈಕ್ ನ್ನು ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ  ಚಾಸಾ-3 ರವರ ಬಲಭಾಗದ ಮಂಡಿಯ ಕೆಳಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ. ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ **ಕಲಂ 125(ಬಿ)** ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ ಎಂದು  ಆರೋಪಣೆ ಹೊರಿಸಲಾಗಿದೆ.

ಪ್ರಃ 1) ಕನ್ನಡದಲ್ಲಿ ಓದಿ ಹೇಳಿದ ಮೇಲಿನ ದೋಷಾರೋಪಣೆ ಅರ್ಥವಾಯಿತೇ?
ಉಃ ಅರ್ಥವಾಯಿತು

ಪ್ರಃ 2) ಅಪರಾಧವನ್ನು ಒಪ್ಪಿಕೊಳ್ಳುವಿರೋ ಅಥವಾ ಸಾಕ್ಷಿಗಳ ವಿಚಾರಣೆಯಾಗ ಬಯಸುವಿರಾ?
ಉಃ ಒಪ್ಪಿಕೊಳ್ಳುತ್ತೇನೆ

ಆರೋಪಿಯ ವಿರುದ್ಧ ದೋಷಾರೋಪಣೆ ರಚಿಸಿ ನೇರವಾಗಿ ಓದಿ ತಿಳಿಸಿದ ನಂತರ ಆತನು ಕೊಟ್ಟ ಉತ್ತರವನ್ನೇ ಸರಿಯಾಗಿ ಪಡೆದುಕೊಳ್ಳಲಾಯಿತೆಂದು ದೃಢೀಕರಿಸಿದೆ.

ದಿಃ 10-02-2026

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು  ಪ್ರ.ದ.ನ್ಯಾ.ದಂ.ಗಳು,
ಕೆ ಆರ್ ನಗರ.

**ಆರೋಪಿಯ ಸಹಿಃ**